


ಸಮರ್ಪಣೆ (SAMARPAN) - ವಿಶ್ವದ ಪ್ರಥಮ ಪ್ರದರ್ಶನ, ಸೈಂಟ್ ಲೂಯಿಸ್ನಲ್ಲಿ "ಭಾರತ ದೇಶದ ಸ್ವಾತಂತ್ರ್ಯದ ಅಮೃತ ಮಹೋತ್ಸವ"

ಅಮೆರಿಕಾದ ಸೈಂಟ್ ಲೂಯಿಸ್ನಲ್ಲಿ ನೆಲೆಸಿರುವ ಭಾರತೀಯರೆಲ್ಲರು ಸೇರಿಕೊಂಡು ೭೫(75th) ನೇ ವರ್ಷದ ಭಾರತ ಮಾತೆಯ ಸ್ವಾತಂತ್ರ್ಯ ಮಹೋತ್ಸವನ್ನು ಬಹಳ ವಿಜೃಂಭಣೆಯಿಂದ ಆಚರಿಸಲು ಕೈ ಜೋಡಿಸಿದ್ದಾರೆ. "ಸಮರ್ಪಣೆ" ಎಂಬುದು ಒಂದು ಕಲಾತ್ಮಕ ನಿರೂಪಣೆಯಾಗಿದೆ. ಈ ನೃತ್ಯ ರೂಪಕದಲ್ಲಿ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾರತೀಯರು ಬ್ರಿಟಿಷ್ ಸಾಮ್ರಾಜ್ಯದಿಂದ ಸ್ವಾತಂತ್ರ್ಯನ್ನು ಪಡೆಯಲು ನಡೆಸಿದ ಉಗ್ರ ಹೋರಾಟವನ್ನು ಕಲಾತ್ಮಕವಾಗಿ ನಿರೂಪಿಸಲಾಗಿದೆ.

ಅಮೆರಿಕಾದ ಸೈಂಟ್ ಲೂಯಿಸ್ನಲ್ಲಿರುವ ಖ್ಯಾತ ಕಲಾವಿದ ಹಾಗು ಸೂರ್ಯ ಪರ್ಫಾರ್ಮಿಂಗ್ ಆರ್ಟ್ಸ್ ಸಂಸ್ಥೆಯ ಕಲಾತ್ಮಕ ನಿರ್ದೇಶಕರಾದ ಶ್ರೀ ಪ್ರಸನ್ನ ಕಸ್ತೂರಿಯವರು ಈ ನೃತ್ಯ ರೂಪಕದ ಪರಿಕಲ್ಪನೆ ಮಾಡಿ, ಬರೆದು ನಿರ್ದೇಶಿಸಿದ್ದಾರೆ. "ಸಮರ್ಪಣೆ" ಯ ಪ್ರಥಮ ಪ್ರದರ್ಶನವು ಆಗಸ್ಟ್ ೧೩, ೨೦೨೨ (Aug 13, 2022) ಶನಿವಾರದಂದು ಸುಪ್ರಸಿದ್ಧ ಬ್ಲಾಂಚೆ ಎಂ. ಟೌಹಿಲ್ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ (Blanche M. Touhill Performing Arts Center) ಕಲಾ ಕೇಂದ್ರದಲ್ಲಿ ಲೋಕಾರ್ಪಣೆಗೊಳ್ಳಲಿದೆ. ಈ ಅಭೂತಪೂರ್ವ ನೃತ್ಯ ರೂಪಕಕ್ಕೆ ಸಂಗೀತವನ್ನು ಭಾರತ ದೇಶದ ಖ್ಯಾತ ಅನುಭವಿ ಸಂಗೀತಗಾರರಾದ ಶ್ರೀ ತಿರುಮಲೆ ಶ್ರೀನಿವಾಸ್ (ಚಾಮಿ) ರವರು ಸಂಯೋಜಿಸಿದ್ದಾರೆ. ಇದರಲ್ಲಿ ಭಾಗವಹಿಸಿತ್ತಿರುವ ನೃತ್ಯಗಾರರು ಕುಮಾರಿ ಸಮನ್ವಿತ ಕಸ್ತೂರಿ (ಫಾಕ್ಸ್ ಯುವ ಪ್ರತಿಭಾ ಪ್ರದರ್ಶನದ ವಿಜೇತೆ ೨೦೧೭, ೨೦೧೯, ಸೈಂಟ್ ಲೂಯಿಸ್), ಕುಮಾರಿ ಬಿಯಾಂಕ ರಾಧಾಕೃಷ್ಣ (ಭಾರತ), ಮಣಿಪುರಿ ನೃತ್ಯಗಾರರಾದ ಸಂಜೀವ್ ಭಟ್ಟಚಾರ್ಯ (ಅಮೇರಿಕಾ), ಅಮರ್ ನಾಥ್ ಘೋಷ್ (ಭಾರತ), ಮತ್ತು ಸೈಂಟ್ ಲೂಯಿಸ್ ನ ಸ್ಥಳೀಯ ಸಂಸ್ಥೆಗಳಿಂದ ನೂರಕ್ಕೂ ಹೆಚ್ಚು ಕಲಾವಿದರು ಭಾಗವಹಿಸಲಿದ್ದಾರೆ. ಬೆಂಗಳೂರಿನ ಖ್ಯಾತ ನೃತ್ಯ ಗುರು ಮತ್ತು ಶಾಂತಲ ನೃತ್ಯ ಅಕಾಡೆಮಿಯ ನಿರ್ದೇಶಕರಾದ ಪುಲಿಕೇಶಿ ಕಸ್ತೂರಿ ತಮ್ಮ ಮಾರ್ಗದರ್ಶನ ಮತ್ತು ಸಹಕಾರವನ್ನು ನೀಡಲಿದ್ದಾರೆ.

ಸಮರ್ಪಣೆ, ಇದೊಂದು ಎಣೆಯಿಲ್ಲದ ನೃತ್ಯ ರೂಪಕವನ್ನು ಕಲಾವಿದರು  ಭಾರತ ಮಾತೆಯ ಮಣ್ಣಿನ ಮೇಲೆ ಬ್ರಿಟಿಷರ ವಸಾಹತುಷಾಯಿ ಆಕ್ರಮಣದ ಕಾರಣಗಳು, ಪರಿಣಾಮಗಳು, ಪರಿಹಾರಗಳು, ಇದೆಲ್ಲ ವಿಚಾರಗಳನ್ನು ಸೂಕ್ಷ್ಮವಾಗಿ ಗಮನದಲಿಟ್ಟುಕೊಂಡು ಎಳೆ ಎಳೆಯಾಗಿ ಕಲಾಭಿಮಾನಿಗಳ ಮುಂದೆ ಪ್ರದರ್ಶಿಸಲಿದ್ದಾರೆ. ೧೬(16th Centruy) ನೇ ಶತಮಾನದಲ್ಲಿ ಬ್ರಿಟಿಷರ ಈಸ್ಟ್ ಇಂಡಿಯಾ ಕಂಪೆನಿಯ ಆಗಮನ, ೧೮೬೦(1860)ರಲ್ಲಿ ತಮ್ಮ ಬ್ರಿಟಿಷ್ ದಬ್ಬಾಳಿಕೆಯ ಪ್ರಾಬಲ್ಯದ ನೇಯ್ಗೆ ಹಾಗೂ ಭಾರತದ ಪೂರ್ವ-ಪಶ್ಚಿಮ, ಉತ್ತರ-ದಕ್ಷಿಣ ಹೀಗೆ ಎಲ್ಲಾ ಭಾಗದ ಭಾರತೀಯರ ಸ್ವಾತಂತ್ರ್ಯ ಹೋರಾಟಗಾರರ ಪ್ರತಿರೋಧ ಹಾಗು ಕೊನೆಯಲ್ಲಿ ಪರಾಕಾಷ್ಟೆ ಮುಟ್ಟಿದ ಘಟನೆಗಳು ಮತ್ತು ಶತಮಾನಗಳ ಹೋರಾಟದ ಶಕ್ತಿಯಿಂದ ೧೯೪೭(1947) ರಲ್ಲಿ ಭಾರತ ಮಾತೆಗೆ ದಕ್ಕಿದ ಸ್ವಾತಂತ್ರ್ಯ, ಈ ಎಲ್ಲಾ ಸನ್ನಿವೇಶಗಳು "ಸಮರ್ಪಣೆ" ಯಲ್ಲಿ ಪರಿಣಾಮಕಾರಿಯಾಗಿ ಮೂಡಿ ಬರಲಿದೆ.

**Details at www.sooryaperformingarts.org**




ಈ ರೂಪಕ ಮಾತೃಭೂಮಿಗಾಗಿ ಭರಿಸಲಾಗದ ತ್ಯಾಗ ಮಾಡಿದ, ಗುಲಾಮಗಿರಿ ಸಂಕೋಲೆಗಳಿಂದ ಬಿಡಿಸಿದ ಕೆಚ್ಚೆದೆಯ ಧೈರ್ಯಶಾಲಿ ಪುರಷರು ಮತ್ತು ಮಹಿಳಾ ಮಣಿಗಳ ಶೌರ್ಯದ ಹೋರಾಟವನ್ನು ನಮಗೆಲ್ಲಾ ಕಣ್ಣಿಗೆ ಕಟ್ಟುವಂತೆ ನೆನಪಿಸುತ್ತದೆ ಮತ್ತು ನಾವೆಲ್ಲ ಹಿಂದೆಂದೂ ನೋಡಿರಿದ ಅಧ್ಭುತವಾದ ಇತಿಹಾಸಕ್ಕೆ ಒಂದು ಮಿಂಚು ನೋಟವನ್ನು ಕೊಡಲಿದೆ. ಸಮರ್ಪಣೆ ನಮ್ಮ ತಲೆಮಾರಿಗೆ ಇತಿಹಾಸವನ್ನು ನೆನಿಪಿಸುವ ಹಾಗು ಮುಂದಿನ ಪೀಳಿಗೆಗೆ ಕಣ್ಣು ತೆರಿಸುವ ಪ್ರಯತ್ನಕ್ಕೆ ನಾಂದಿಯಾಗಲಿದೆ.

ಸಮರ್ಪಣೆ ರೂಪಕದ ಪ್ರಥಮ ಪ್ರದರ್ಶನದಲ್ಲಿ ಮಹಾತ್ಮಾ ಗಾಂಧೀಜಿಯವರ ಉತ್ತಮ ವಿಚಾರ ಕೊಡುಗೆಗಳಾದ ಅಹಿಂಸೆ, ಸತ್ಯಾಗ್ರಹ, ಅಸಹಕಾರಗಳನ್ನು ಕಲಾತ್ಮಕವಾಗಿ ಬಿಂಬಿಸಲಾಗುತ್ತದೆ. ಬಿನ್ನಾಭಿಪ್ರಾಯಗಳನ್ನು ಹೇಗೆ ಶಾಂತಿಯುತವಾಗಿ ವ್ಯಕ್ತಪಡಿಸಬಹದು ಎಂಬ ಮಾರ್ಗವನ್ನು ಭಾರತೀಯ ಸ್ವಾತಂತ್ರ್ಯಹೋರಾಟಗಾರರು ಪ್ರಪಂಚಕ್ಕೆ ತೋರಿಸಿಕೊಟ್ಟಿದ್ದಾರೆ. ಮಾರ್ಟಿನ್ ಲೂಥರ್ ಕಿಂಗ್, ನೆಲ್ಸನ್ ಮಂಡೇಲಾ ಹೀಗೆ ವಿಶ್ವದ ಅನೇಕರು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಅನ್ವೇಷಕರು ಅಹಿಂಸೆಯನ್ನು ತಮ್ಮ ತತ್ವಕ್ಕಾಗಿ ಅಳವಡಿಸಿಕೊಂಡು ಹೋರಾಡಿದ್ದಾರೆ.

ಸಮರ್ಪಣೆಯಲ್ಲಿ ಮೂಡಿಬರಲಿರುವ ಐತಿಹಾಸಿಕ ಘಟನೆಗಳನ್ನು ಭಾರತೀಯರೆಲ್ಲರೊಂದಿಗೆ ಭಾರತ, ಅಮೇರಿಕಾ, ಕೆನಡಾ ದೇಶದ ಸುಮಾರು ೧೨೦(120+ artists)ಕ್ಕೂ ಹೆಚ್ಚು ಕಲಾವಿದರು ಒಟ್ಟುಗೂಡಿ ಭಾರತದ ವಿಭಿನ್ನ ಭಾಷೆಗಳ (ಹಿಂದಿ, ಕನ್ನಡ, ತಮಿಳು, ತೆಲುಗು, ಬೆಂಗಾಲಿ ಸಮೇತ) ಸಂಭಾಷಣೆಗಳು ಮತ್ತು ಹಾಡುಗಳ ಭಾಷಾ ಸೌಂದರ್ಯದ ಮೂಲಕ ಜನರನ್ನು ರೋಮಾಂಚನಗೊಳಿಸಲಿದ್ದಾರೆ.

ಸಮರ್ಪಣೆ ಪ್ರದರ್ಶನವು ಸೈಂಟ್ ಲೂಯಿಸ್ನಷ್ಟೆ ಅಲ್ಲದೆ ಪ್ರಪಂಚದಾದ್ಯಂತ ನೆಲಿಸಿರುವ ಸ್ವಾತಂತ್ರ್ಯ ಪ್ರೇಮಿಗಳು ಭಾರತ ಮಾತೆಯ ಸ್ವಾತಂತ್ರ್ಯ ಹೋರಾಟಕ್ಕಾಗಿ ಹೋರಾಡಿದ ವೀರರಿಗೆ, ಅವರ ದೇಶ ಪ್ರೇಮಕ್ಕೆ ಸಲ್ಲಿಸುತ್ತಿರುವ ಗೌರವ ಹಾಗು ದೇಶಕ್ಕಾಗಿ, ಸ್ವಾತಂತ್ರ್ಯಕ್ಕಾಗಿ ಪ್ರಪಂಚದಾದ್ಯಂತ ತಮ್ಮ ಪ್ರಾಣಾರ್ಪಣೆ ಮಾಡಿದ ವೀರಯೋಧರಿಗೆ ಸಲ್ಲಿಸುತ್ತಿರುವ ಅತಿ ದೊಡ್ಡ ಕಲಾ ಕೃತಜ್ಞತೆಯ ಕಾವ್ಯವಾಗಿ ಮೂಡಿ ಬರಲಿದೆ.

"ಬನ್ನಿ, ಸ್ವಾತಂತ್ರ್ಯ ನಮ್ಮ ಜನ್ಮ ಸಿದ್ಧ ಹಕ್ಕು ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಎಂಬ ಪ್ರತಿ ಧ್ವನಿಯ ಮತ್ತೆ ಕೇಳಲು, ಈ ಸ್ವಾತಂತ್ರ್ಯಕ್ಕಾಗಿ ಬಲಿದಾನ ಮಾಡಿದವರ ನೆನಪು ಮಾಡಿಕೊಳ್ಳೋಣ!"

ಜೈ ಹಿಂದ್...